ಕರ್ನಾಟಕ ಸರ್ಕಾರ

ಸಂಖ್ಯೆ ಕಂಇ 73 ಎಲ್‌ಆರ್‌ಎ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು,ದಿನಾಂಕ:22-11-2008

ಜಿಲ್ಲಾಧಿಕಾರಿಗಳ ಕಛೇರಿ
ಹಾಸನ ಜಿಲ್ಲೆ, ಹಾಸನ
17 DEC 2008

## ಸುತ್ತೋಲೆ

ವಿಷಯ:- ರಾಜ್ಯದ ತಾಲ್ಲೂಕು ಕಛೇರಿಗಳಲ್ಲಿ ನಡೆಯುತ್ತಿರುವ ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 79(ಎ) ಮತ್ತು 79(ಬಿ) ಇದರ ಕಾನೂನುಬಾಹಿರ ದುರ್ಬಳಕೆ ಹಾಗೂ ಇನ್ನಿತರ ವಿಷಯಗಳ ಕುರಿತು.

******

ರಾಜ್ಯದ ತಾಲ್ಲೂಕು ಕಛೇರಿಗಳಲ್ಲಿ ನಡೆಯುತ್ತಿರುವ ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 79(ಎ) ಮತ್ತು 79 (ಬಿ)ಗಳನ್ನು ಉಲ್ಲಂಘಿಸಿ ಜಮೀನುಗಳನ್ನು ಖರೀದಿ ಮಾಡುವುದು, ತಹಶೀಲ್ದಾರ್ ಕಛೇರಿಯಿಂದ ವಿಚಾರಣೆ ಹಂತದಲ್ಲಿಯೇ ಪ್ರಕರಣಗಳನ್ನು ಉಪ ವಿಭಾಗಾಧಿಕಾರಿಗಳ ನ್ಯಾಯಾಲಯಕ್ಕೆ ವರ್ಗಾಯಿಸುವುದು, ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ಹಲವಾರು ಬಾರಿ ಮುಂದಕ್ಕೆ ಹಾಕುವುದು, ಸಂಬಂಧಪಟ್ಟವರಿಗೆ ಸೂಕ್ತ ದಾಖಲಾತಿಗಳನ್ನು ಕೋರಿಕೆಯ ಮೇರೆಗೆ ಒದಗಿಸದೆ ಬೋಗಸ್ ದಾಖಲೆಗಳನ್ನು ಸೃಷ್ಟಿಸುವುದು ಮತ್ತು ಇನ್ನಿತರ ವಿಷಯಗಳ ಬಗ್ಗೆ ಸಾರ್ವಜನಿಕರಿಂದ ಹಲವಾರು ದೂರುಗಳು ಸರ್ಕಾರಕ್ಕೆ ಬರುತ್ತಲಿವೆ. ಸರ್ಕಾರವು ಇದನ್ನು ಗಂಭೀರವಾಗಿ ಪರಿಗಣಿಸಿದೆ.

ಅರ್ಜಿದಾರರು ತಮ್ಮ ಸಮಸ್ಯೆ ಬಗೆಹರಿಸಿಕೊಳ್ಳಲು ಪದೆ ಪದೇ ತಾಲ್ಲೂಕು ಮಟ್ಟದ ಕಛೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಿ ಅವರಿಗೆ ಅನುಕೂಲ ಕಲ್ಪಿಸಲು ಸಂಬಂಧಪಟ್ಟ ತಹಶೀಲ್ದಾರ್‌ಗಳು ಮತ್ತು ಉಪವಿಭಾಗಾಧಿಕಾರಿಗಳು ಅರ್ಜಿದಾರರ ಅರ್ಜಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಯಾವ ಯಾವ ಮಾಹಿತಿಗಳು ಬೇಕು ಎಂಬುದರ ಬಗ್ಗೆ ಅರ್ಜಿದಾರರಿಂದ ಒಟ್ಟಾರೆ ಮಾಹಿತಿ ಪಡೆದು ತಕ್ಷಣ ಪ್ರಕರಣಗಳನ್ನು ಕಾನೂನಿನ್ವಯ ಇತ್ಯರ್ಥಗೊಳಿಸಿ ಅರ್ಜಿದಾರರಿಗೆ ಹಿಂಬರಹ ನೀಡತಕ್ಕದ್ದು. ತಹಶೀಲ್ದಾರರು ಮತ್ತು ಉಪವಿಭಾಗಾಧಿಕಾರಿಗಳು ತಮ್ಮ ತಮ್ಮ ಕಛೇರಿಯಲ್ಲಿ ಸ್ವೀಕೃತವಾಗುವ ಅರ್ಜಿಗಳನ್ನು ವಿಳಂಬ ಮಾಡದೇ ಕಾಲಮಿತಿಯೊಳಗೆ ಇತ್ಯರ್ಥಗೊಳಿಸಲು ಕ್ರಮ ವಹಿಸತಕ್ಕದ್ದು.

ಈ ಮೇಲೆ ತಿಳಿಸಿದ ಸೂಚನೆಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸುವುದು. ತಾಲ್ಲೂಕು ಕಛೇರಿಗಳಲ್ಲಿ ಕಿರುಕುಳ ನೀಡಲಾಗುತ್ತದೆಯೆಂದು ಇನ್ನು ಮುಂದೆ ಅರ್ಜಿದಾರರುಗಳಿಂದ ದೂರುಗಳು ಬಂದಲ್ಲಿ ಮತ್ತು ಕಿರುಕುಳ ಸಾಬೀತಾದಲ್ಲಿ ಸಂಬಂಧಪಟ್ಟ ತಹಶೀಲ್ದಾರ್ ಹಾಗೂ ಉಪ ವಿಭಾಗಾಧಿಕಾರಿಗಳನ್ನು ನೇರ ಜವಾಬ್ದಾರರನ್ನಾಗಿ ಹಾಗೂ ಕಾರಣಕರ್ತರನ್ನಾಗಿ ಮಾಡಿ ಅವರನ್ನು ಶಿಸ್ತು ಕ್ರಮಕ್ಕೆ ಒಳಪಡಿಸಲಾಗುವುದು ಎಂದು ಈ ಮೂಲಕ ತಿಳಿಸಿದೆ.

(ಡಿ. ತಂಗರಾಜ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕಂದಾಯ ಇಲಾಖೆ

ಪ್ರತಿ:-

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಗುಲ್ಬರ್ಗಾ ಮತ್ತು ಬೆಳಗಾವಿ ವಿಭಾಗ.
2. ಎಲ್ಲಾ ಜಿಲ್ಲಾಧಿಕಾರಿಗಳು.
3. ಎಲ್ಲಾ ಉಪ ವಿಭಾಗಾಧಿಕಾರಿಗಳು, (ಜಿಲ್ಲಾಧಿಕಾರಿಗಳ ಮುಖಾಂತರ)
4. ಎಲ್ಲಾ ತಹಶೀಲ್ದಾರ್‌ಗಳು, (ಜಿಲ್ಲಾಧಿಕಾರಿಗಳ ಮುಖಾಂತರ)
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಅವರ ಆಪ್ತ ಕಾರ್ಯದರ್ಶಿ.
6. ಸರ್ಕಾರದ ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ, (ಭೂ ಸುಧಾರಣೆ) (ಭೂ ಮಂಜುರಾತಿ) (ಸೇವೆಗಳು)
7. ಹೆಚ್ಚಿನ ಪ್ರತಿಗಳು: ಶಾಖಾ ರಕ್ಷಾ ಕಡತ